ಶ್ರೀ ಎಂ. ವೈ. ಘೊರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಆಗಾಗ್ಗೆ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ) ಏರು ಕೊಳವೆ ಮತ್ತು ವಿತರಣಾ ಪೈಪುಗಳಿಗೆ ಹಾನಿಯುಂಟಾದಾಗ ಆ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆಯುಂಟಾಗುತ್ತದೆ.
ಇ) ಕೊಳವೆ ಪೈಪುಗಳು ಭೂಮಟ್ಟದ ಮೇಲೆ ಅಂದರೆ ಶಹಬಾದ್ ಕಲ್ಲು ಚಪ್ಪಡಿಗಳ ಮೇಲೆ 1 ಕಿ.ಮಿ. ದೂರ ಹಾದು ಹೋಗುವುದರಿಂದ ಪೈಪುಗಳು ಹಾನಿಗೊಳಗಾಗುವ ಸಂದರ್ಭವಿರುತ್ತವೆ.
ಈ) ಈ ಮೇಲ್ಕಟ್ಟದ ಒಂದು ಕಿ.ಮೀ ಉದ್ದದ ಪಿ.ವಿ.ಸಿ. ಕೊಳವೆಗಳ ಬದಲಾವಣೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ವಿಷಯಃ ಗುಲ್ಬರ್ಗಾ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕಿನಿಂದ ರಸಗೊಬ್ಬರ ಖರೀದಿ.
887
ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕಿನಿಂದ ರಸಗೊಬ್ಬರ ಖರೀದಿ ಮಾಡಲು (ಬಿ) ಕಾಂಪೋನೆಂಟ್ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಮಂಜೂರಾಗಿ ಅದರ ಪ್ರಕಾರ ಸಹಕಾರ ಸಂಘಗಳವರು ರಸಗೊಬ್ಬರವನ್ನು ಖರೀದಿ ಮಾಡಿ ಸಾಲ ಮಂಜೂರಾಗಿರುವ ಸದಸ್ಯರುಗಳಿಗೆ ಹಂಚಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಒಂದು ವೇಳೆ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿರುವ ಸದಸ್ಯರಿಗೆ ರಸಗೊಬ್ಬರ ಮುಟ್ಟಿಸಿಲ್ಲವೆಂದರೆ ಇದು ದುರುಪಯೋಗವಾಗಿದ್ದು ನಿಜವಲ್ಲವೆ?
ಇ) ಈ ಪ್ರಕಾರ ಜೇವರ್ಗಿ ತಾಲ್ಲೂಕಿನ ನೆಲ್ಲೋಗಿ ಹಾಗೂ ಅಂಥೋಲ ಸೇವಾ ಸಹಕಾರ ಸಂಘದವರು (ಬಿ) ಕಾಂಪೋನೆಂಟ್‌ದಿಂದ ಗೊಬ್ಬರವನ್ನು ಪಡೆದು ಸಾಲ ಮಂಜೂರಾಗಿರುವ ಸದಸ್ಯರಿಗೆ ಮುಟ್ಟಿಸದಿದ್ದರೆ ಸಂಬಂಧಪಟ್ಟವರ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು?
ಈ) ಒಂದು ವೇಳೆ ಈ ರಸಗೊಬ್ಬರ ದುರುಪಯೋಗವಾದ್ದು ನಿಜವಿದ್ದರೆ ರೈತರಿಗೆ ಮುಟ್ಟುವ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಹೌದು ಬಂದಿವೆ.
ಆ) ಹೌದು.
ಇ) ನೆಲ್ಲೋಗಿ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ರೂ.1.00 ಲಕ್ಷ ಮೊತ್ತದ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿದ್ದು ಈ ಪೈಕಿ ಸಂಘವು ರೂ.82,000 ಮೊತ್ತದ ಗೊಬ್ಬರವನ್ನು ರೈತ ಸದಸ್ಯರಿಗೆ ವಿತರಿಸಿ ಉಳಿದ ರೂ.18.000 ಬ್ಯಾಂಕಿಗೆ ಪಾವತಿ ಮಾಡಿದ್ದಾರೆ.
ಅದರಂತೆ ಅಂಥೋಲ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ರೂ.3.62 ಲಕ್ಷ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿದ್ದು ಸಂಘದ ಕಾರ್ಯದರ್ಶಿಯ ಮಾರಾಟ

ಮಂಡಳದಿಂದ ಗೊಬ್ಬರವನ್ನು ಪಡೆದಿದ್ದು ಸದಸ್ಯರಿಗೆ ಹಂಚಿರುವುದಿಲ್ಲವೆಂದು ಸದಸ್ಯರುಗಳಿಗೆ ದೂರು ನೀಡಿದ್ದರಿಂದ ಸಂಘದ ಕಾರ್ಯದರ್ಶಿಯನ್ನು ಅಮಾನತ್ತಿನಲ್ಲಿಡಲಾಗಿವೆ. ಹಾಗೂ ಮುಂದಿನ ವಿಚಾರಣೆ ನಡೆಸಲಾಗುತ್ತಿದೆ.

ಈ) ಹಂಗಾಮು ಈಗಾಗಲೇ ಮುಗಿದಿರುವುದರಿಂದ ದುರುಪಯೋಗವಾದ ರಸಗೊಬ್ಬರವನ್ನು ಈಗ ರೈತರಿಗೆ ಮುಟ್ಟಿಸುವ ವ್ಯವಸ್ಥೆ ಮಾಡುವುದರಿಂದ ಯಾವುದೇ ಪ್ರಯೋಜನವಾಗದು. ಮುಂದಿನ ಹಂಗಾಮಿಗೆ ಸೂಕ್ತ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳುವುದು.

ವಿಷಯ : ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು, ನೌಕರರಿಗೆ ಮಾಸಲಾತಿ.

667

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಈ ಬ್ಯಾಂಕಿನಲ್ಲಿ ಡಿಸೆಂಬರ್ 1992ರ ಅಂತ್ಯಕ್ಕೆ ಇರುವ ಒಟ್ಟು ನೌಕರರು : ಅಧಿಕಾರಿಗಳು ಸೇರಿದಂತೆ ಸಂಖ್ಯೆ ಎಷ್ಟು ?

ಆ) ಈ ಪೈಕಿ ಎಷ್ಟು ಜನ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳು (ವಿವಿಧ ವರ್ಗಗಳ ವಿವರಗಳನ್ನು ನೀಡುವುದು)

ಇ) ಈ ಮೇಲ್ಕಂಡ ಬ್ಯಾಂಕಿನಲ್ಲಿ ನೌಕರರುಗಳ ನೇಮಕಾತಿ ಮಾಡಿಕೊಳ್ಳುವಲ್ಲಿ ಮಾಸಲಾತಿ ಪದ್ಧತಿಯನ್ನು ಅನುಸರಿಸಿದೆಯೇ?

ಈ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರುಗಳಿಗೆ ವಿವಿಧ ಹುದ್ದೆಗಳಲ್ಲಿ ನೀಡಿರುವ ಶೇಕಡಾವಾರು ಎಷ್ಟು ?

ಉ) ನೌಕರರ, ನೇಮಕಾತಿಯಲ್ಲಿ ಬ್ಯಾಂಕ್‌ನವರು ಮಾಸಲಾತಿ ಪದ್ಧತಿಯನ್ನು ಆಚರಿಸದಿದ್ದಲ್ಲಿ ಸರ್ಕಾರವು ಆಡಳಿತ ಮಂಡಳಿ : ಸರ್ಕಾರದ ನಾಮಿನಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಅಲ್ಲದೆ ಬ್ಯಾಂಕ್‌ನ ಆಡಳಿತ ಮಂಡಳಿಯನ್ನು ರದ್ದು ಪಡಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಸಹಕಾರ ರಾಜ್ಯ ಸಚಿವರು) :

ಅ) ಒಟ್ಟು 121 ನೌಕರರು (ಅಧಿಕಾರಿಗಳನ್ನು ಸೇರಿಸಿ)

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳಿಗೆ ಸೇರಿದ ಇಬ್ಬರು ನೌಕರರು ಕಿರಿಯ ಸಹಾಯಕರ ಹುದ್ದೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಇ) ಇಲ್ಲ.

ಈ) ಕಿರಿಯ ಸಹಾಯಕರ ಹುದ್ದೆಗಳಲ್ಲಿ ಶೇಕಡ 2.2 ಅರ್ಜಿ ಬಂದಿದ್ದು, ಉಳಿದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಹುದ್ದೆಗಳಿಗೆ ಅರ್ಜಿ ಬಂದಿರುವುದಿಲ್ಲ.

ಉ) ಯಾವ ಸಹಕಾರ ಸಂಘಗಳು ಸರ್ಕಾರದಿಂದ ಧನ ಸಹಾಯ ಪಡೆಯುತ್ತಿಲ್ಲವೋ ಅಂತಹ ಸಂಘಗಳಿಗೆ ನೇಮಕಾತಿಯಲ್ಲಿ ರೋಸ್ಟರ್ ಪಾಲನೆ ಮಾಡಲು ಸೂಚನೆ ನೀಡುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ.